ದಿನಾಂಕ 02.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ಕೃತ್ಯ ನಡೆದ ಸಮಯದಲ್ಲಿ ಸದರಿ ಬಟ್ಟೆಯನ್ನು ಚಾಸಾ.1 ರವರು ಧರಿಸಿದ್ದರು ಎಂದು ಹೇಳಿದ್ದು ಸದರಿ ಬಟ್ಟೆಯನ್ನು ನಾನು ನಿಶಾನೆ ಪಿ-5 ರ ಪ್ರಕಾರ ಪಂಚನಾಮೆ ಮಾಡಿರುತ್ತೇನೆ. ನಿಶಾನೆ ಪಿ-6 ಮತ್ತು 7 ರ ಪ್ರಕಾರ ಪೋಟೋವನ್ನು ಸ್ಥಳದಲ್ಲಿ ತೆಗೆದಿರುತ್ತೇನೆ. ನಂತರ ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿ ಸಲ್ಲಿಸಿರುತ್ತೇನೆ.

ಅದೇ ದಿನ ಚಾಸಾ.10, 11, 12, 13, 14, 15, 16, 17 ರವರ ಹೇಳಿಕೆ ಪಡೆದಿರುತ್ತೇನೆ.

ಅದೇ ದಿನ ರಾತ್ರಿ 23.00 ಗಂಟೆಗೆ ಧಾರವಾಡ ಸವದತ್ತಿ ರಸ್ತೆ ಡಿಪೋ ಸರ್ಕಲ ಹತ್ತಿರ ನಾನು ಮತ್ತು ಸಿಬ್ಬಂದಿಗಳು ಆರೋಪಿತನನ್ನು ದಸ್ತಗಿರಿ ಮಾಡಿ ಠಾಣೆಗೆ ತಂದಿದ್ದೇವೆ. ಆತನನ್ನು ದಸ್ತಗಿರಿ ಮಾಡಿ ಆತನ ಸ್ವಇಚ್ಛಾ ಹೇಳಿಕೆ ಪಡೆದಿರುತ್ತೇನೆ. ಆತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ತನುಜಾ ಇವಳಿಗೆ ಕೊಲೆ ಮಾಡುವ ಉದ್ದೇಶದಿಂದ ಚುಚ್ಚಿ ಗಾಯಪಡಿಸಿದ ಚಾಕುವನ್ನು

ಬಚ್ಚಿಟ್ಟಿದ್ದು ನನ್ನ ಜೊತೆಗೆ ತಾವು ಬಂದರೆ ತೋರಿಸಿ ಹಾಜರುಪಡಿಸುತ್ತೇನೆ ಎಂದು ಹೇಳಿದ ಭಾಗವನ್ನು ನಿಶಾನೆ ಪಿ–24 ಎಂದು ಗುರುತಿಸಲಾಯಿತು.

ಕೃತ್ಯ ಮಾಡಿದ ಸಮಯದಲ್ಲಿ ಆತನು ಧರಿಸಿದ್ದ ಬಟ್ಟೆಗಳಲ್ಲಿ ರಕ್ತದ ಕಲೆಗಳು ಇದ್ದು ಅದನ್ನು ಪಂಚರಿಗೆ ನೋಟೀಸು ಕೊಟ್ಟು ಕರೆಸಿ ಅವರ ಸಮಕ್ಷಮ ನಿಶಾನೆ ಪಿ–11 ರ ಪ್ರಕಾರ ಪಂಚನಾಮೆಯನ್ನು ದಿನಾಂಕ 22.02.2022 ರಂದು ಬೆಳಿಗ್ಗೆ 9 ರಿಂದ 9.45 ರವರೆಗೆ ಮಾಡಿರುತ್ತೇನೆ. ಒಂದು ನೀಲಿ ಬಣ್ಣದ ಜೀನ್ಸ ಪ್ಯಾಂಟ , ಒಂದು ಕಪ್ಪು ಕಲರಿನ ಅರ್ಧ ತೋಳಿನ ಟೀಶರ್ಟ, ಒಂದು ತಿಳಿ ನೀಲಿ ಬಣ್ಣದ ಪೂರ್ತಿ ತೋಳಿನ ಟೀ ಶರ್ಟನ್ನು ಜಪ್ತಪಡಿಸಿಕೊಂಡಿರುತ್ತೇನೆ. ಆರೋಪಿತನ ಮನೆಯಿಂದ ಬದಲಿ ಬಟ್ಟೆಯನ್ನು ತರಿಸಿ ಅದನ್ನು ಹಾಕಿಸಿ ಈ ಬಟ್ಟೆಗಳನ್ನು ಜಪ್ತಪಡಿಸಿಕೊಂಡಿರುತ್ತೇನೆ ನಂತರ ಪಿ ಎಪ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಶಾನೆ ಪಿ–11 ರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ–11(ಸಿ) ಎಂದು ಗುರ್ತಿಸಲಾಯಿತು. ನಿಶಾನೆ ಪಿ–12 ಮತ್ತು 13 ರ ಪ್ರಕಾರ ಫೋಟೋ ತೆಗೆದಿದ್ದು ನನ್ನ ಸಹಿಯನ್ನು ನಿಶಾನೆ ಪಿ–13(ಎ) ಎಂದು ಗುರ್ತಿಸಲಾಯಿತು.

ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಬಟ್ಟೆಗಳನ್ನು ಈಗಾಗಲೇ ಎಂ ಓ 7 ರಿಂದ 9 ಎಂದು ಗುರುತಿಸಲಾಗಿದೆ. ಅದನ್ನು

ನ್ಯಾಯಾಲಯದಲ್ಲಿ ಈ ದಿನ ನೋಡಿ ಗುರುತಿಸಿರುತ್ತೇನೆ. ನಿಶಾನೆ ಪಿ–11 ಪಂಚನಾಮೆಗೆ ಚಾಸಾ.8 ಮತ್ತು 9 ರವರನ್ನು ಪಂಚರಾಗಿ ಕರೆಸಿರುತ್ತೇನೆ.

ದಿನಾಂಕ 23.02.2022 ರಂದು ಚಾಸಾ 6 ಮತ್ತು 7 ರವರನ್ನು ಪಂಚರಾಗಿ ಕರೆಸಿ ಆರೋಪಿಯು ನಮ್ಮನ್ನು ಹಾವೇರಿ ಪೇಟೆಯ ಮೇದಾರ ಓಣಿಯಲ್ಲಿರುವ ಆತನ ವಾಸದ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ಆರೋಪಿ, ಪಂಚರು ಮತ್ತು ನಾನು ಮನೆಯ ಒಳಗೆ ಹೋದೆವು. ಆಗ ಆರೋಪಿಯು ತಾನು ಬಚ್ಚಿಟ್ಟಿದ್ದ ಚಾಕುವನ್ನು ತೆಗೆದು ತೋರಿಸಲಾಗಿ ಒಂದು ಪ್ಲಾಸ್ಟಿಕ ಕೈಹಿಡಿಯ ಚಾಕುವಾಗಿದ್ದು ಅದನ್ನು ನಾನು ಸ್ಥಳದಲ್ಲಿ ಪ್ಯಾಕ ಮಾಡಿ ಸೀಲು ಮಾಡಿ ಜಪ್ತ ಮಾಡಿಕೊಂಡಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ರವರೆಗೆ ನಿಶಾನೆ ಪಿ–8 ರಂತೆ ಮಾಡಿದ್ದು ನನ್ನ ಸಹಿ ಯನ್ನು ನಿಶಾನೆ ಪಿ–8(ಸಿ) ಎಂದು ಗುರ್ತಿಸಲಾಯಿತು. ಸ್ಥಳದಲ್ಲಿ ಎರಡು ಫೋಟೋಗಳನ್ನು ನಿಶಾನೆ ಪಿ–9 ಮತ್ತು 10 ರಂತೆ ತೆಗೆದಿರುತ್ತೇನೆ. ಸದರಿ ಚಾಕುವನ್ನುನೋಡಿದರೆ ಗುರುತಿಸಬಲ್ಲೆ. ಈಗ ನನಗೆ ತೋರಿಸಿದ ಎಂ ಓ 1 ಚಾಕು ಆ ದಿನ ನಾನು ಜಪ್ತಪಡಿಸಿದ ಚಾಕುವಾಗಿರುತ್ತದೆ.

ನಂತರ ಎಲ್ಲರೂ ಠಾಣೆಗೆ ಬಂದೆವು. ಜಪ್ತಪಡಿಸಿದ ವಸ್ತುವನ್ನು ಪಿಎಪ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಆರೋಪಿಯನ್ನು ರಿಮಾಂಡ ಯಾದಿಯ ಮೂಲಕ ನ್ಯಾಯಾಲಯಕ್ಕೆ ಕಳಿಸಿರುತ್ತೇನೆ.

ನಂತರ ಚಾಸಾ.15, 16, 17 ಇವರ ಪುನರ ಹೇಳಿಕೆ ಪಡೆದಿರುತ್ತೇನೆ.

ಚಾಸಾ.23 ರವರು ಘಟನಾ ಸ್ಥಳದಲ್ಲಿ ಮತ್ತು ಪಂಚನಾಮೆ ಕಾಲದಲ್ಲಿ ತೆಗೆದ ಪೋಟೋಗಳನ್ನು ಪ್ರಿಂಟ ತೆಗೆದು ಅದರ ಪ್ರತಿಯನ್ನು ಮತ್ತು ಸಿಡಿಯನ್ನು ನನಗೆ ಕೊಟ್ಟು ಕಲಂ 65 (ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಸರ್ಟಿಪಿಕೇಟನ್ನು ನಿಶಾನೆ ಪಿ-19 ರ ಪ್ರಕಾರ ಕೊಟ್ಟಿದ್ದು ನನ್ನ ಸಹಿಯನ್ನು ನಿಶಾನೆ ಪಿ-19(ಬಿ) ಎಂದು ಗುರ್ತಿಸಲಾಯಿತು.

ದಿನಾಂಕ 04.03.2022 ರಂದು ಜಪ್ತ ಮಾಡಿದ ವಸ್ತುಗಳನ್ನು ಎಪಎಸಎಲ್ ಬೆಳಗಾವಿ ಇವರಿಗೆ ಚಾಸಾ.22 ರವರ ಮುಖಾಂತರ ಕಳಿಸಿಕೊಟ್ಟಿರುತ್ತೇನೆ. ಸದರಿ ವಸ್ತುಗಳನ್ನು ಕೊಟ್ಟ ನಂತರ ಅವರು ಸ್ವೀಕೃತಿ ಪತ್ರ ಕೊಟ್ಟಿರುತ್ತಾರೆ. ನಿಶಾನೆ ಪಿ-20 ಸ್ವೀಕೃತಿ ಪತ್ರದಲ್ಲಿ ಸಾಕ್ಷಿಯು ಅದನ್ನು ಪಡೆದುಕೊಂಡ ಬಗ್ಗೆ ಯಾವುದೇ ಸಹಿ ಅಥವಾ ಸೀಲು ಇರುವುದಿಲ್ಲ.

ದಿನಾಂಕ 05.03.2022 ರಂದು ಫಿರ್ಯಾದಿಯ ಗಾಯದ ಪ್ರಮಾಣ ಪತ್ರ ಕೊಡುವಂತೆ ವೈದ್ಯರಿಗೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ಈಗ

ನೋಡುತ್ತಿದ್ದು ಅದನ್ನು ನಿಶಾನೆ ಪಿ–25 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ–25(ಎ) ಎಂದು ಗುರ್ತಿಸಲಾಯಿತು.

ದಿನಾಂಕ 16.03.2022 ರಂದು ವೈದ್ಯರು ಗಾಯದ ಪ್ರಮಾಣ ಪತ್ರವನ್ನು ಕೊಟ್ಟು ಗಾಯವು ಸಾದಾ ಸ್ವರೂಪದ ಗಾಯವಾಗಿದ್ದು ಹರಿತವಾದ ವಸ್ತುವಿನಿಂದ ಆಗುವ ಸಾಧ್ಯತೆ ಇದೆ ಎಂದು ತಮ್ಮ ಅಭಿಪ್ರಾಯ ಕೊಟ್ಟಿರುತ್ತಾರೆ. ಆ ಬಗ್ಗೆ ನಿಶಾನೆ ಪಿ–17 ರಲ್ಲಿ ನನ್ನ ಸಹಿಯನ್ನು ನಿಶಾನೆ ಪಿ–17(ಬಿ) ಎಂದು ಗುರ್ತಿಸಲಾಯಿತು.

ದಿನಾಂಕ 22.02.2022 ರಂದು ಮಾನ್ಯ ಸಹಾಯಕ ಆಯುಕ್ತರು, ವಲಯ ಕಚೇರಿ, ಹುಬ್ಬಳ್ಳಿ ಧಾರವಾಡ ಇವರಲ್ಲಿ ಕೃತ್ಯ ನಡೆದ ಸ್ಥಳವಾದ ಫಿರ್ಯಾದಿಯ ತಂದೆ ಪರಶುರಾಮ ಹನುಮಂತಪ್ಪ ಸುಣಗಾರ ಇವರ ಮನೆಯ ಉತಾರ ಕೊಡುವಂತೆ ಪತ್ರ ಬರೆದಿದ್ದು ಸದರಿ ಪತ್ರವನ್ನು ನಿಶಾನೆ ಪಿ–26 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ–26(ಎ) ಎಂದು ಗುರ್ತಿಸಲಾಯಿತು. ಈಗ ನನಗೆ ತೋರಿಸಿದ ನಿಶಾನೆ ಪಿ–16 ಉತಾರೆಯನ್ನು ದಿನಾಂಕ 23.02.2022 ರಂದು ನಾನು ಸ್ವೀಕರಿಸಿದ್ದು ನನ್ನ ಸಹಿಯನ್ನು ನಿಶಾನೆ ಪಿ–16(ಬಿ) ಎಂದು ಗುರ್ತಿಸಲಾಯಿತು.

ನಂತರ ತನಿಖೆಯನ್ನು ಪೂರೈಸಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನಂತರ ದಿನಾಂಕ 27.03.2023 ರಂದು ಎಫಎಸಎಲಗೆ ಕಳಿಸಿದ ಎಲ್ಲಾ ಆರ್ಟಿಕಲಗಳು ವರದಿಯೊಂದಿಗೆ ವಾಪಸು ಬಂದಿದ್ದನ್ನು ಪಡೆದಿದ್ದು ಅದನ್ನು ಈಗಾಗಲೇ ನಿಶಾನೆ ಪಿ–21 ಎಂದು ಗುರುತಿಸಲಾಗಿದ್ದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ–21(ಬಿ) ಎಂದು ಗುರುತಿಸಲಾಯಿತು.

ದಿನಾಂಕ 17.06.2023 ರಂದು ಜಪ್ತಪಡಿಸಿದ ಚಾಕುವಿನ ಫೈನಲ ಒಪಿನಿಯನನ್ನು ತೆಗೆದುಕೊಳ್ಳಲು ಚಾಕು ಮತ್ತು ಕೋರಿಕೆ ಪತ್ರ ಕಳಿಸಿಕೊಟ್ಟಿರುತ್ತೇನೆ. ನಿಶಾನೆ ಪಿ–18 ರ ಪ್ರಕಾರ ವೈದ್ಯರು ಅದೇ ದಿನ ಅವರ ಫೈನಲ ಒಪಿನಿಯನ್ನನ್ನು ನೀಡಿರುತ್ತಾರೆ ಹಾಗೂ ಚಾಕುವನ್ನು ಪ್ಯಾಕ ಮಾಡಿ ಸೀಲು ಮಾಡಿ ಡಿಸ್ಟ್ರಿಕ್ಟ ಆಸ್ಪತ್ರೆಯ ಸೀಲು ಹಾಕಿರುತ್ತಾರೆ. ಸದರಿ ಅಭಿಪ್ರಾಯ ಪತ್ರವನ್ನು ಈಗಾಗಲೇ ನಿಶಾನೆ ಪಿ–18 ಎಂದು ಗುರುತಿಸಲಾಗಿದೆ. ಎಫಎಸಎಲ ವರದಿ ಹಾಗೂ ಅಭಿಪ್ರಾಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಚಾಸಾ.11 ರವರು ನನ್ನ ಮುಂದೆ ನಿಶಾನೆ ಪಿ–14 ರ ಪ್ರಕಾರ, ಚಾಸಾ.13 ರವರು ನನ್ನ ಮುಂದೆ ನಿಶಾನೆ ಪಿ–15 ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸಿಎಂ (ಎಲಎಡಿಸಿ) ವಕೀಲರಿಂದ**

ದಿನಾಂಕ 21.02.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಾಯಂಕಾಲ 8.00 ಗಂಟೆಗೆ ತನುಜಾ ಸುಣಗಾರ ಎಂಬುವವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ನಂಬರ 27/2022 ಕಲಂ 452, 323, 324, 307, 504, 506 ಐಪಿಸಿ ಪ್ರಕಾರ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿದ್ದು ಚಾಸಾ.21 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಮರುದಿನ 22.02.2022 ರಂದು ನಾನು ಘಟನಾ ಸ್ಥಳಕ್ಕೆ ಹೋಗಿ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿದ್ದೇನೆ ಎಂದು, ಮಹೇಶ ದವಳೆ ಮತ್ತು ರಾಜು ಶೇಖಪ್ಪಾ ಕಟ್ಟಿ ಎಂಬುವವರನ್ನು ಪಂಚರಾಗಿ ಕರೆಸಿರುತ್ತೇನೆ ಎಂದು, ನಂತರ ಲೈನ ಬಜಾರ, ವಡ್ಡರ ಓಣಿ, ಧಾರವಾಡದ

ಹತ್ತಿರ ಇರುವ ಕೊರವರ ಓಣಿಯಲ್ಲಿರುವ ಘಟನಾ ಸ್ಥಳ ಫಿರ್ಯಾದಿಯ ಮನೆಗೆ ಹೋಗಿದ್ದು ಫಿರ್ಯಾದುದಾರಳಾದ ತನುಜಾ ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ನಿಶಾನೆ ಪಿ–2 ರ ಪ್ರಕಾರ ಮಾಡಿದ್ದೇನೆಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ನಿಶಾನೆ ಪಿ–3 ಮತ್ತು 4 ರ ಪ್ರಕಾರ ಪೋಟೋ ತೆಗೆದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಫಿರ್ಯಾದಿಯ ಬಟ್ಟೆ ಜಪ್ತ ಪಂಚನಾಮೆಯನ್ನು ದಿನಾಂಕ 22.02.2022 ರಂದು ಸಾಯಂಕಾಲ 16 ರಿಂದ 17 ಗಂಟೆವೆರೆಗೆ ನಿಶಾನೆ ಪಿ–5 ರಂತೆ ಮಾಡಿದ್ದೇನೆ ಎಂದು, ಫಿರ್ಯಾದಿಯ ತಂದೆಯು ಬಟ್ಟೆಯನ್ನು ತಂದು ಠಾಣೆಗೆ ಹಾಜರುಪಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೃತ್ಯ ನಡೆದ ಸಮಯದಲ್ಲಿ ಸದರಿ ಬಟ್ಟೆಯನ್ನು ಚಾಸಾ.1 ರವರು ಧರಿಸಿದ್ದರು ಎಂದು ಹೇಳಿದ್ದು ಸದರಿ ಬಟ್ಟೆಯನ್ನು ನಾನು ನಿಶಾನೆ ಪಿ–5 ರ ಪ್ರಕಾರ ಪಂಚನಾಮೆ ಮಾಡಿರುತ್ತೇನೆ ಎಂದು , ನಿಶಾನೆ ಪಿ–6 ಮತ್ತು 7 ರ ಪ್ರಕಾರ ಪೋಟೋವನ್ನು ಸ್ಥಳದಲ್ಲಿ ತೆಗೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ಚಾಸಾ.10, 11, 12, 13, 14, 15, 16, 17 ರವರ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ರಾತ್ರಿ 23.00 ಗಂಟೆಗೆ ಧಾರವಾಡ ಸವದತ್ತಿ ರಸ್ತೆ ಡಿಪೋ ಸರ್ಕಲ ಹತ್ತಿರ ನಾನು ಮತ್ತು ಸಿಬ್ಬಂದಿಗಳು ಆರೋಪಿತನನ್ನು ದಸ್ತಗಿರಿ ಮಾಡಿ ಠಾಣೆಗೆ ತಂದಿದ್ದೇವೆ ಎಂದು, ಆತನನ್ನು ದಸ್ತಗಿರಿ ಮಾಡಿ ಆತನ ಸ್ವಇಚ್ಚಾ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ತನುಜಾ ಇವಳಿಗೆ ಕೊಲೆ ಮಾಡುವ ಉದ್ದೇಶದಿಂದ ಚುಚ್ಚಿ ಗಾಯಪಡಿಸಿದ ಚಾಕುವನ್ನು ಬಚ್ಚಿಟ್ಟಿದ್ದು ನನ್ನ ಜೊತೆಗೆ ತಾವು ಬಂದರೆ ತೋರಿಸಿ ಹಾಜರುಪಡಿಸುತ್ತೇನೆ ಎಂದು ಹೇಳಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೃತ್ಯ ಮಾಡಿದ ಸಮಯದಲ್ಲಿ ಆತನು ಧರಿಸಿದ್ದ ಬಟ್ಟೆಗಳಲ್ಲಿ ರಕ್ತದ ಕಲೆಗಳು ಇದ್ದು ಅದನ್ನು ಪಂಚರಿಗೆ ನೋಟೀಸು ಕೊಟ್ಟು ಕರೆಸಿ ಅವರ ಸಮಕ್ಷಮ ನಿಶಾನೆ ಪಿ–11 ರ ಪ್ರಕಾರ ಪಂಚನಾಮೆಯನ್ನು ದಿನಾಂಕ 22.02.2022 ರಂದು ಬೆಳಿಗ್ಗೆ 9 ರಿಂದ 9.45 ರವರೆಗೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಒಂದು ನೀಲಿ ಬಣ್ಣದ ಜೀನ್ಸ ಪ್ಯಾಂಟ , ಒಂದು ಕಪ್ಪು ಕಲರಿನ ಅರ್ಧ ತೋಳಿನ ಟೀಶರ್ಟ, ಒಂದು ತಿಳಿ ನೀಲಿ ಬಣ್ಣದ ಪೂರ್ತಿ ತೋಳಿನ ಟೀ ಶರ್ಟನ್ನು ಜಪ್ತಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಮನೆಯಿಂದ ಬದಲಿ ಬಟ್ಟೆಯನ್ನು ತರಿಸಿ ಅದನ್ನು ಹಾಕಿಸಿ ಈ ಬಟ್ಟೆಗಳನ್ನು ಜಪ್ತಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 23.02.2022 ರಂದು ಚಾಸಾ 6 ಮತ್ತು 7 ರವರನ್ನು ಪಂಚರಾಗಿ ಕರೆಸಿ ಆರೋಪಿಯು ನಮ್ಮನ್ನು ಹಾವೇರಿ ಪೇಟೆಯ ಮೇದಾರ ಓಣಿಯಲ್ಲಿರುವ ಆತನ ವಾಸದ ಮನೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದು, ಆರೋಪಿ, ಪಂಚರು ಮತ್ತು ನಾನು ಮನೆಯ ಒಳಗೆ ಹೋದೆವು ಎಂದು, ಆಗ ಆರೋಪಿಯು ತಾನು ಬಚ್ಚಿಟ್ಟಿದ್ದ ಚಾಕುವನ್ನು ತೆಗೆದು ತೋರಿಸಲಾಗಿ ಒಂದು ಪ್ಲಾಸ್ಟಿಕ ಕೈಹಿಡಿಯ ಚಾಕುವಾಗಿದ್ದು ಅದನ್ನು ನಾನು ಸ್ಥಳದಲ್ಲಿ ಪ್ಯಾಕ ಮಾಡಿ ಸೀಲು ಮಾಡಿ ಜಪ್ತ ಮಾಡಿಕೊಂಡಿರುತ್ತೇನೆ ನಿಶಾನೆ ಪಿ-8 ರ ಪ್ರಕಾರ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ರವರೆಗೆ ನಿಶಾನೆ ಪಿ-8 ರಂತೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಚಾಸಾ.15, 16, 17 ಇವರ ಪುನರ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ.23 ರವರು ಘಟನಾ ಸ್ಥಳದಲ್ಲಿ ಮತ್ತು ಪಂಚನಾಮೆ ಕಾಲದಲ್ಲಿ ತೆಗೆದ ಪೋಟೋಗಳನ್ನು ಪ್ರಿಂಟ ತೆಗೆದು ಅದರ ಪ್ರತಿಯನ್ನು ಮತ್ತು ಸಿಡಿಯನ್ನು ನನಗೆ ಕೊಟ್ಟು ಕಲಂ 65 (ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಸರ್ಟಿಪಿಕೇಟನ್ನು ನಿಶಾನೆ ಪಿ–19 ರ ಪ್ರಕಾರ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 04.03.2022 ರಂದು ಜಪ್ತ ಮಾಡಿದ ವಸ್ತುಗಳನ್ನು ಎಪಎಸಎಲ್ ಬೆಳಗಾವಿ ಇವರಿಗೆ ಚಾಸಾ.22 ರವರ ಮುಖಾಂತರ ಕಳಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 05.03.2022 ರಂದು ಫಿರ್ಯಾದಿಯ ಗಾಯದ ಪ್ರಮಾಣ ಪತ್ರ ಕೊಡುವಂತೆ ವೈದ್ಯರಿಗೆ ಪತ್ರ ನಿಶಾನೆ ಪಿ–25 ರಂತೆ ಬರೆದಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 16.03.2022 ರಂದು ವೈದ್ಯರು ಗಾಯದ ಪ್ರಮಾಣ ಪತ್ರವನ್ನು ಕೊಟ್ಟು ಗಾಯವು ಸಾದಾ ಸ್ವರೂಪದ ಗಾಯವಾಗಿದ್ದು ಹರಿತವಾದ

ವಸ್ತುವಿನಿಂದ ಆಗುವ ಸಾಧ್ಯತೆ ಇದೆ ಎಂದು ತಮ್ಮ ಅಭಿಪ್ರಾಯ ಕೊಟ್ಟಿರುತ್ತಾರೆ. ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 22.02.2022 ರಂದು ಮಾನ್ಯ ಸಹಾಯಕ ಆಯುಕ್ತರು, ವಲಯ ಕಚೇರಿ, ಹುಬ್ಬಳ್ಳಿ ಧಾರವಾಡ ಇವರಲ್ಲಿ ಕೃತ್ಯ ನಡೆದ ಸ್ಥಳವಾದ ಫಿರ್ಯಾದಿಯ ತಂದೆ ಪರಶುರಾಮ ಹನುಮಂತಪ್ಪ ಸುಣಗಾರ ಇವರ ಮನೆಯ ಉತಾರ ಕೊಡುವಂತೆ ನಿಶಾನೆ ಪಿ–26 ರಂತೆ ಪತ್ರ ಬರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ತನಿಖೆಯನ್ನು ಪೂರೈಸಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು, ನಂತರ ದಿನಾಂಕ 27.03.2023 ರಂದು ಎಪಎಸಎಲಗೆ ಕಳಿಸಿದ ಎಲ್ಲಾ ಆರ್ಟಿಕಲಗಳು ವರದಿಯೊಂದಿಗೆ ವಾಪಸು ಬಂದಿದ್ದನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 17.06.2023 ರಂದು ಜಪ್ತಪಡಿಸಿದ ಚಾಕುವಿನ ಪೈನಲ ಒಪಿನಿಯನನ್ನು ತೆಗೆದುಕೊಳ್ಳಲು ಚಾಕು ಮತ್ತು ಕೋರಿಕೆ ಪತ್ರ ಕಳಿಸಿಕೊಟ್ಟಿರುತ್ತೇನೆ ಎಂದು , ನಿಶಾನೆ ಪಿ–18 ರ ಪ್ರಕಾರ ವೈದ್ಯರು ಅದೇ ದಿನ ಅವರ ಪೈನಲ ಒಪಿನಿಯನ್ನನ್ನು ನೀಡಿರುತ್ತಾರೆ ಹಾಗೂ ಚಾಕುವನ್ನು ಪ್ಯಾಕ

ಮಾಡಿ ಸೀಲು ಮಾಡಿ ಡಿಸ್ಟ್ರಿಕ್ಟ ಆಸ್ಪತ್ರೆಯ ಸೀಲು ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತನಿಖಾ ಕಾಲಕ್ಕೆ ಆರೋಪಿಯು ಎನು ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಆತನ ಮೇಲೆ ನಮ್ಮ ಅಂಕಿ ಅಂಶಕ್ಕೋಸ್ಕರ ಸುಳ್ಳು ಚಾರ್ಜಶೀಟ ಪೈಲ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ</u>**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.